ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1984
ಸದಸ್ಯರ ಹೆಸರು	:	ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	16.03.2022
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಗೋಮಾಳ ಜಾಗವು ಲಭ್ಯವಿದೆ; (ತಾಲ್ಲೂಕುವಾರು ವಿಸ್ತೀರ್ಣದೊಂದಿಗೆ ಮಾಹಿತಿ ನೀಡುವುದು)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಭ್ಯವಿರುವ ಗೋಮಾಳ ಜಮೀನಿನ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರಮ ಸಂಖ್ಯೆ</th><th>ತಾಲ್ಲೂಕು</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>1.</td><td>ಮಂಗಳೂರು</td><td>553.41</td></tr>
<tr><td>2.</td><td>ಬಂಟ್ವಾಳ</td><td>1318.67</td></tr>
<tr><td>3.</td><td>ಪುತ್ತೂರು</td><td>734.70</td></tr>
<tr><td>4.</td><td>ಬೆಳ್ತಂಗಡಿ</td><td>1032.37</td></tr>
<tr><td>5.</td><td>ಸುಳ್ಯ</td><td>447.07</td></tr>
<tr><td>6.</td><td>ಕಡಬ</td><td>215.44</td></tr>
<tr><td>7.</td><td>ಮುಲ್ಕಿ</td><td>170.40</td></tr>
<tr><td>8.</td><td>ಮೂಡಬಿದ್ರೆ</td><td>353.91</td></tr>
<tr><td></td><td>ಒಟ್ಟು</td><td>4825.97</td></tr>
</table>
</td></tr>
<tr><td>(ಆ)</td><td>ಗೋಮಾಳ ಸ್ಥಳವನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗುತ್ತಿದೆ;</td><td rowspan="2">ಗೋಮಾಳ ಜಮೀನುಗಳು ಜಾನುವಾರುಗಳು ಮೇಯುವುದಕ್ಕಾಗಿ ಕಾಯ್ದಿರಿಸಲು ಇರುವ ಜಮೀನಾಗಿದ್ದು, ಸದರಿ ಜಮೀನುಗಳನ್ನು ಯಾವುದೇ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4) ರಡಿ ಈ ಕೆಳಕಂಡ ಉದ್ದೇಶಗಳಿಗೆ ಗೋಮಾಳ ಜಮೀನನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.
1. ನಿವೇಶನ ರಹಿತ ವ್ಯಕ್ತಿಗಳಿಗೆ ಮನೆ ನಿವೇಶನಗಳ ಉದ್ದೇಶಕ್ಕಾಗಿ.
2. ವ್ಯವಸಾಯದ ಉದ್ದೇಶಗಳಿಗಾಗಿ ಅನುಸೂಚಿತ ಜಾತಿಗಳು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ.
3. ಅನಧಿಕೃತ ಸಾಗುವಳಿಯ ಸಕ್ರಮಗೊಳಿಸುವಿಕೆಗೆ.</td></tr>
<tr><td>(ಇ)</td><td>ಗೋಮಾಳ ಸ್ಥಳವನ್ನು ಸಂಘ-ಸಂಸ್ಥೆಗಳಿಗೆ ಮಂಜೂರು ಮಾಡಲು ಇರುವ ನಿಯಮಗಳೇನು; ಯಾವ ಯಾವ ಉದ್ದೇಶಗಳಿಗೆ ಗೋಮಾಳ ಜಾಗವನ್ನು ಮಂಜೂರು ಮಾಡಬಹುದು; (ವಿವರ ನೀಡುವುದು)</td></tr>
</table>

		4. ಗ್ರಾಮದ ನಿವಾಸಿಗಳ ಸ್ಮಶಾನಕ್ಕಾಗಿ. 5. ಸರ್ಕಾರದ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಮಂಜೂರು ಮಾಡುವುದು ಅಥವಾ ಕಾಯ್ದಿರಿಸುವುದು ಅಂದರೆ, ಸರ್ಕಾರಿ ಶಾಲೆಗಳು, ಕಾಲೇಜುಗಳು, ವಸತಿ ಶಾಲೆಗಳು, ಹಾಸ್ಟೆಲ್‌ಗಳು, ಆಸ್ಪತ್ರೆಗಳು, ಅಂಗನವಾಡಿ, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತದ ಉಪ ಸ್ಟೇಷನ್‌ಗಳು (ಕೆ.ಪಿ.ಟಿ.ಸಿ.ಎಲ್) ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆ.ಎಸ್.ಆರ್.ಟಿ.ಸಿ) ದ ಬಸ್ ಡಿಪ್ರೋಗಳಿಗೆ.
(ಈ)	ಕಳೆದ ಐದು ವರ್ಷಗಳಲ್ಲಿ ಯಾವ ಯಾವ ಸಂಘ ಸಂಸ್ಥೆಗಳಿಗೆ ಎಷ್ಟು ಗೋಮಾಳ ಜಾಗವನ್ನು ಮಂಜೂರು ಮಾಡಲಾಗಿದೆ; ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಕಡತ ಸಂಖ್ಯೆ:ಕಂಇ 37 ಎಲ್‌ಜಿಎ 2022)

(ಆರ್.ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1984 ರ ಅನುಬಂಧ

ಬೆಂಗಳೂರು ನಗರ ಜಿಲ್ಲೆ :-

1. ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲಾ ಹೋಬಳಿ ಬಾಗಲೂರು ಗ್ರಾಮದ ಸ.ನಂ. 1 ರಲ್ಲಿ 0-02 ಗುಂಟೆ ಜಮೀನನ್ನು ವ್ಯವಸಾಯ ಸೇವಾ ಸಹಕಾರಿ ಸಂಘ ಬಾಗಲೂರು ಇವರಿಗೆ ಮಂಜೂರು ಮಾಡಲಾಗಿದೆ.
2. ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.111 ರಲ್ಲಿ 8-37 ರಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಇವರಿಗೆ ಶೈಕ್ಷಣಿಕ ಉದ್ದೇಶಕ್ಕೆ ಜಮೀನನ್ನು ಮಂಜೂರು ಮಾಡಲಾಗಿದೆ
3. ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ ಇಟಿಗಲ್‌ಪುರ ಗ್ರಾಮದ ಸ.ನಂ. 50ರಲ್ಲಿ 3-38 ಎ/ಗುಂ ಜಮೀನನ್ನು ಕರ್ನಾಟಕ ರಾಜ್ಯಪಾಲರ ಸಚಿವಾಲಯ ನೌಕರರ ಗೃಹ ನಿರ್ಮಾಣ ಸಂಘ ಇವರಿಗೆ ಮಂಜೂರು ಮಾಡಲಾಗಿದೆ.
4. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ತಾಲ್ಲೂಕು, ಯಶವಂತಪುರ ಹೋಬಳಿ ಕೆರೆಗುಡ್ಡಹಳ್ಳಿ ಗ್ರಾಮದ ಸ.ನಂ. 8 ರಲ್ಲಿ 4ಎ/ಗುಂ ಜಮೀನನ್ನು ಮಂಜೂರು ಮಾಡಲಾಗಿದೆ.
5. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ. 182 ರಲ್ಲಿ 9 ಎಕರೆ ಜಮೀನನ್ನು ಪಂಚಶೀಲಾ ಜಿಲ್ವೇರ್ ಅಸೋಸಿಯೇಷನ್ ಇವರಿಗೆ ಮಂಜೂರು ಮಾಡಲಾಗಿದೆ.
6. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕಂಬೀಪುರ ಗ್ರಾಮದ ಸ.ನಂ. 43 ರಲ್ಲಿ 35-00 ಎಕರೆ ಜಮೀನನ್ನು ಶ್ರೀ ಆದಿಚುಂಚನಗಿರಿ ಟ್ರಸ್ಟ್ ಇವರಿಗೆ ಮಂಜೂರು ಮಾಡಲಾಗಿದೆ.
7. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳ್ಳೇನಹಳ್ಳಿ ಗ್ರಾಮದ ಸ.ನಂ. 49 ರಲ್ಲಿ 8-32 ಎಕರೆ/ಗುಂಟೆ ಜಮೀನನ್ನು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಇವರಿಗೆ ಮಂಜೂರು ಮಾಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ :-

1. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಹೋಬಳಿ, ಬೊಮ್ಮವಾದ ಗ್ರಾಮದ ಸ.ನಂ.36 ರಲ್ಲಿ 2-17 ಎಕರೆ/ಗುಂಟೆ ಜಮೀನನ್ನು ಶ್ರೀ ಗುರುಗುಂಡ ಬ್ರಹ್ಮೇಶ್ವಸ್ವಾಮಿ ವಿದ್ಯಾ ಸಂಸ್ಥೆ ಇವರಿಗೆ ಮಂಜೂರು ಮಾಡಲಾಗಿದೆ.
2. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ, ತಾ: ದೇವನಹಳ್ಳಿ ಗ್ರಾಮದ ಸ.ನಂ.157 ರಲ್ಲಿ 1.00 ಎಕರೆ ಜಮೀನನ್ನು ಶ್ರೀ ಒಕ್ಕಲಿಗರ ಸಮುದಾಯ ಭವನ ಇವರಿಗೆ ಮಂಜೂರು ಮಾಡಲಾಗಿದೆ.

3. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾ: ಬೀರಸಂದ್ರ ಗ್ರಾಮದ ಸ.ನಂ.11 ರಲ್ಲಿ 10 ಗುಂಟೆ ಜಮೀನನ್ನು ಕರ್ನಾಟಕ ರಾಜ್ಯ ಕಂದಾಯ ಇಲಾಖೆ ನೌಕರರ ಸಂಘ ಇವರಿಗೆ ಮಂಜೂರು ಮಾಡಲಾಗಿದೆ.
4. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾ: ಬೀರಸಂದ್ರ ಗ್ರಾಮದ ಸ.ನಂ. 11 ರಲ್ಲಿ 10 ಗುಂಟೆ ಜಮೀನನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಇವರಿಗೆ ಮಂಜೂರು ಮಾಡಲಾಗಿದೆ.
5. ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಬ್ಯಾಡರಹಳ್ಳಿ ಗ್ರಾಮದ ಸ.ನಂ. 9 ರಲ್ಲಿ 1-05 ಎ/ಗುಂಟೆ ಜಮೀನನ್ನು ಕುರುಬರ ಸಂಘ ಇವರಿಗೆ ಮಂಜೂರು ಮಾಡಲಾಗಿದೆ.
6. ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಯಲಚಗೆರೆ ಗ್ರಾಮದ ಸ.ನಂ. 74-75 ರಲ್ಲಿ 10 ಎಕರೆ ಜಮೀನನ್ನು ಶ್ರೀ ಸಿದ್ಧಲಿಂಗಸ್ವಾಮಿಗಳು, ಸಿದ್ಧಗಂಗ ಮಠ ತುಮಕೂರು ಇವರಿಗೆ ಮಂಜೂರು ಮಾಡಲಾಗಿದೆ.
7. ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ದಿಡ್ಡೇರಿ ಗ್ರಾಮದ ಸ.ನಂ. 23 ರಲ್ಲಿ 2.00 ಎಕರೆ ಜಮೀನನ್ನು ಗುರುದೇವಾ ಸೇವಾ ಸಂಸ್ಥೆ(ರ) ಸಮಾಧಾನ ಆಶ್ರಮ ಇವರಿಗೆ ಮಂಜೂರು ಮಾಡಲಾಗಿದೆ.
8. ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಹಂಚಿಪುರ ಗ್ರಾಮದ ಸ.ನಂ. 124 ರಲ್ಲಿ 12.00 ಎಕರೆ ಜಮೀನನ್ನು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಇವರಿಗೆ ಮಂಜೂರು ಮಾಡಲಾಗಿದೆ.

<u>ರಾಮನಗರ ಜಿಲ್ಲೆ:-</u>

1. ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಹಾರೋಬೆಲೆ ಗ್ರಾಮದಲ್ಲಿ 10.00 ಎಕರೆ ಜಮೀನನ್ನು ಹಾರೋಬೆಲೆ ಕಪಾಲ ಬೆಟ್ಟ ಅಭಿವೃದ್ಧಿ ಟ್ರಸ್ಟ್ ಇವರಿಗೆ ಮಂಜೂರು ಮಾಡಲಾಗಿದೆ.
2. ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಇಲ್ಲಿ 6-25 ಎಕರೆ/ಗುಂಟೆ ಜಮೀನನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ, ಬೆಂಗಳೂರು ಇವರಿಗೆ ಮಂಜೂರು ಮಾಡಲಾಗಿದೆ.

<u>ಕೋಲಾರ ಜಿಲ್ಲೆ:-</u>

1. ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಕಸಬಾ ಹೋಬಳಿ ಪಾಪರಾಜನಹಳ್ಳಿ ಗ್ರಾಮದ ಸ.ನಂ. 48 ರಲ್ಲಿ 3.00 ಎಕರೆ ಜಮೀನನ್ನು ಆದಿಮ ಸಾಂಸ್ಕೃತಿಕ ಕೇಂದ್ರ, ಕೋಲಾರ ರವರಿಗೆ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಮಂಜೂರು ಮಾಡಲಾಗಿದೆ.
2. ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ಹೊಳಲಿ ಗ್ರಾಮದ ಸ.ನಂ. 103 ರಲ್ಲಿ 16.00 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್, ಬೆಂಗಳೂರು ಇವರಿಗೆ ಮಂಜೂರು ಮಾಡಲಾಗಿದೆ.

3. ಕೋಲಾರ ಜಿಲ್ಲೆ, ಕೆ.ಜಿ.ಎಫ್ ತಾಲ್ಲೂಕು ರಾಬರ್ಟ್ ಸನ್‌ಪೇಟೆ ಹೋಬಳಿ ಗಿಡ್ಡೇಗೌಡನಹಳ್ಳಿ ಗ್ರಾಮದ ಸ.ನಂ. 5 ರಲ್ಲಿ 2.00 ಎಕರೆ ಜಮೀನನ್ನು ಮಿನಿ ಪವರ್ ಲೂಮ್ ಪಾರ್ಕ್ ಸ್ಥಾಪಿಸಲು ಮೇ: ಪವರ್ ಲೂಮ್ ಪಾರ್ಕ್ ಪ್ರೈ.ಲಿ ಇವರಿಗೆ ಮಂಜೂರು ಮಾಡಲಾಗಿದೆ.
4. ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಕಸಬಾ ಹೋಬಳಿ ಕುಂಬಾಪುರ ಗ್ರಾಮದ ಸ.ನಂ. 42/2ರಲ್ಲಿ 1-08 ಎಕರೆ/ಗುಂಟೆ ಜಮೀನನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಮಂಜೂರು ಮಾಡಲಾಗಿದೆ.

ಶಿವಮೊಗ್ಗ ಜಿಲ್ಲೆ :-

1. ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಕಸಬಾ ಹೋಬಳಿ, ಕಳೂರು ಗ್ರಾಮದ ಸ.ನಂ.209 ರಲ್ಲಿ 3.00 ಎಕರೆ ಗೋಮಾಳ ಜಮೀನನ್ನು ದೀವರ ವಿದ್ಯಾವರ್ಧಕ ಸಂಘ (ರಿ) ಹೊಸನಗರ ಇವರಿಗೆ ಸಮುದಾಯ ಭವನ ಹಾಗೂ ಹಿಂದುಳಿದ ಸಮುದಾಯ ಮಕ್ಕಳ ಕಾಲೇಜು ಕ್ರಿಡಾಂಗಣ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿರುತ್ತದೆ.

ವಿಜಯನಗರ ಜಿಲ್ಲೆ :-

1. ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರಲಹಳ್ಳಿ ಗ್ರಾಮದ ಸರ್ವೆ ನಂ. 39 ರಲ್ಲಿ 9-88 ಎಕರೆ/ಗುಂಟೆ ಜಮೀನು ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಪ್ರಾಣಿ ದಯಾ ಸಂಘ ಹಾಗೂ ಉಪ ನಿರ್ದೇಶಕರು ಪಶುಪಾಲನಾ ಮತ್ತು ವೈದ್ಯಕೀಯ ಸೇವಾ ಇಲಾಖೆ ವಿಜಯನಗರ ಜಿಲ್ಲೆ ಇವರಿಗೆ ಮಂಜೂರು ಮಾಡಲಾಗಿದೆ.

ಕಲಬುರಗಿ ಜಿಲ್ಲೆ :-

1. ಕಲಬುರಗಿ ತಾಲೂಕಿನ ಶರಣಸಿರಸಗಿ ಗ್ರಾಮದ ಸ.ನಂ. 243 ರಲ್ಲಿ 7.00 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ತು ಬೆಂಗಳೂರು ಇವರಿಗೆ ಮಂಜೂರಾತಿ ಮಾಡಲಾಗಿದೆ.
2. ಕಲಬುರಗಿ ತಾಲೂಕಿನ ಕುಸನೂರು ಗ್ರಾಮದ ಸ.ನಂ. 88/1 ವಿಸ್ತೀರ್ಣ 19.00 ಎಕರೆ ಜಮೀನು ಪಾಲಿ ಸಂಸ್ಕೃತ ಮತ್ತು ತುಲನಾತ್ಮಕ ತತ್ವಶಾಸ್ತ್ರ ಟ್ರಸ್ಟ ರವರಿಗೆ ಮಂಜೂರಾತಿ ಮಾಡಲಾಗಿದೆ.

ಮಂಡ್ಯ ಜಿಲ್ಲೆ :-

1. ಅಧ್ಯಕ್ಷರು, ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಇವರಿಗೆ 20.00 ಎಕರೆ ಜಮೀನನ್ನು ಗಾಂಧಿ ಗ್ರಾಮ ಹಾಗೂ ಶಿಕ್ಷಣದ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ.
2. ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ), ನಾಗಮಂಗಲ ಇವರಿಗೆ 25-23 ಎಕರೆ/ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ.

ಚಾಮರಾಜನಗರ ಜಿಲ್ಲೆ:-

1. ಇಂಟರ್‌ನ್ಯಾಷನಲ್ ಬುದ್ಧಿಸ್ಟ್ ಮಾಂಕ್ ಚಾರಿಟೇಬಲ್ ಟ್ರಸ್ಟ್ ಇವರಿಗೆ ನಳಂದ ವಿಶ್ವ ವಿದ್ಯಾಲಯ ಸ್ಥಾಪನೆಗಾಗಿ 25.00 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ:-

1. ಎಕ್ಸ್-ಪರ್ಟ್ ಎಜುಕೇಷನ್ ಮತ್ತು ಚಾರಿಟಬಲ್ (ರಿ), ಮಂಗಳೂರು ಇವರಿಗೆ ಮಂಗಳೂರು ತಾಲ್ಲೂಕು ಅರಕುಳ ಗ್ರಾಮದ ಸ.ನಂ. 73ರಲ್ಲಿ 2.75 ಎಕರೆ ಜಮೀನು ಮಂಜೂರು ಮಾಡಲಾಗಿದೆ.

ಬೆಳಗಾವಿ ಜಿಲ್ಲೆ:-

1. ಬೆಳಗಾವಿ ಜಿಲ್ಲೆ, ಬೆಳಗಾವಿ ತಾಲ್ಲೂಕು, ಸಾವಗಾಂವ ಗ್ರಾಮದ ಸ.ನಂ.225/1 ರಲ್ಲಿ 2.00 ಎಕರೆ ಜಮೀನನ್ನು ಕಂಠೀರವ ಕೇಸರಿ ರತನ ಮಠಪತಿ ಸ್ಪೋರ್ಟ್ಸ್ ಮತ್ತು ಎಜುಕೇಷನ್ ಸೊಸೈಟಿ ಇವರಿಗೆ ಅಂತರ ರಾಷ್ಟ್ರೀಯ ಕುಸ್ತಿ ಶಾಲೆ ಪ್ರಾರಂಭಿಸಲು ಮಂಜೂರು ಮಾಡಲಾಗಿದೆ.
2. ಬೆಳಗಾವಿ ಜಿಲ್ಲೆ, ಬೆಳಗಾವಿ ತಾಲ್ಲೂಕು, ಪೀರನವಾಡಿ ಸ.ನಂ.21 ರಲ್ಲಿ 10 ಗುಂಟೆ ಜಮೀನನ್ನು ಕರ್ನಾಟಕ ಪ್ರದೇಶ ಕುರಬರ ಸಂಘ, ಬೆಂಗಳೂರು ಇವರಿಗೆ ಸಮುದಾಯ ಭವನ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆ.
3. ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಸದಲಗಾ ಗ್ರಾಮದ ಸ.ನಂ. 787/ಅ/1ರಲ್ಲಿ 2-05 ಎಕರೆ/ಗುಂಟೆ ಜಮೀನನ್ನು ಬುದ್ಧ-ಅಂಬೇಡ್ಕರ್ ಸಮಿತಿ (ರಿ) ಸದಲಗಾ ಇವರಿಗೆ ಲುಂಬಿನಿ ಬುದ್ಧ ವಿಹಾರ ಹಾಗೂ ಸುಮುದಾಯ ಭವನ ನಿರ್ಮಾಣಕ್ಕೆ ಮಂಜೂರು ಮಾಡಲಾಗಿದೆ.

ವಿಜಯಪುರ ಜಿಲ್ಲೆ:-

1. ವಿಜಯಪುರ ಜಿಲ್ಲೆ, ತಿಕೋಟ ತಾಲ್ಲೂಕು, ನವರಸಪುರ ಗ್ರಾಮದ ಸ.ನಂ. 62ರಲ್ಲಿ 5.00 ಎಕರೆ ಜಮೀನನ್ನು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾ ಅಭಿವೃದ್ಧಿ ಟ್ರಸ್ಟ್ ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆ:-

1. ಬಾಗಲಕೋಟೆ ಜಿಲ್ಲೆ ಮುದೋಳ ತಾಲ್ಲೂಕಿನಲ್ಲಿ 5.00 ಎಕರೆ ಜಮೀನನ್ನು ಪರಿವರ್ತನ ಸಾಮಾಜಿಕ ಸಂಘ (ರಿ), ಮುದೋಳ ಇವರಿಗೆ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಮಂಜೂರು ಮಾಡಲಾಗಿದೆ.

ಹಾವೇರಿ ಜಿಲ್ಲೆ:-

1. ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿ 3.00 ಎಕರೆ ಜಮೀನನ್ನು ಶ್ರೀ ಬೀರೇಶ್ವರ ಪಂಚ ಸಮಿತಿ ಬ್ಯಾಡಗಿ ಇವರಿಗೆ ಕನಕ ಸಮುದಾಯ ಭವನ ನಿರ್ಮಾಣದ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ.